ಮೈಸೂರ ಗೆಜೆಟ್ಟ

ಸರ್ಕಾರದಿಂದ ಪಾಯಿಷ್ಕ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ|| 12, ಸ್ಕ್ರ 1885.

ಸೂಚನೆ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರುವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಶೀಮೆಯ ಚೀಫ್ ಕೋರ್ಟ್‌ನಲ್ಲಿ.

ಕ್ರಿಮಿನಲ್ ತರಫೆ.

ಸ್ಕ್ರ 1885ನೇ ಇಸವಿ ನವಂಬರ್ 20ನೇ ಮತ್ತು ರೂಲ್ ಆಫ್ ಪ್ರಾಕ್ಟೀಸ್ ನಂಬರ್ 42.

ಪ್ರಥಮ ನಿಚಾರಣೆಗಾಗಲಿ, ಅಥವಾ ದರ್ಯಾಫ್ತ್ ಬಗ್ಯಾಗಲಿ, ಪ್ರತಿ ಪೊಂದು ಕ್ರಿಮಿನಲ್ ಕೋರ್ಟು ರೂಬರೂಬೆ ಬರುವ ಪ್ರತಿ ಒಂದು ಮೊಕದ್ದಮೆಯಲ್ಲಿಯೂ ಇದಕ್ಕೆ ಲಗತ್‌ಮಾಡಿರುವ ನಮೂನೆಯಂತೆ ಡೈರಿ ಇಡಬೇಕೆಂದು ಚೀಫ್ ಕೋರ್ಟ್‌ನವರು ಹುಕ್ಕುಂ ಮಾಡುತ್ತಾರೆ. ಈ ಡೈರಿಯು ಯಿ. ಡೈರಿಯಂದು ಕರಿಯಲ್ಪಡುವದು. ಇದರಲ್ಲಿ ಪ್ರತಿ ಒಂದು ಮೊಕದ್ದಮೆ—ಯಾ ಪ್ರೊಸೀಡಿಂಗ್ಸ್‌ನಲ್ಲಿ ನಡಸಿದ ಪ್ರತಿ ಅಂಕನ್ನೂ ಬರಿಯಬೇಕು. ಮತ್ತು ನಡವಳಿಕೆ ನಡದ ದಿವಸವೇ ಮೇಜಸ್ಟ್ರೇಟರು ಇದಕ್ಕೆ ಯಿನಿಷ್ಯಲ್ ಮಾಡಬೇಕು.

2. ಇಂಗ್ಲೀಷ್ ಭಾಷೆಯು ಕೋರ್ಟು ಅಧಿಕಾರಿಗಳ ಸ್ವಭಾಷೆಯಾಗಿದ್ದ ಪಕ್ಷದಲ್ಲಾಗಲಿ, ಅಥವಾ ಅಭಾಷೆಯಲ್ಲಿ ಅವರಿಗೆ ಸಾಕಾದಷ್ಟು ಪರಿಶ್ರಮ ಇದ್ದ ಪಕ್ಷದಲ್ಲಾಗಲಿ ಡೈರಿಯನ್ನ ಇಂಗ್ಲೀಷ್ ಭಾಷೆಯಲ್ಲಿಡಬೇಕು, ಹಾಗೆ ಇಲ್ಲದ ಪಕ್ಷದಲ್ಲಿ ಕನ್ನಡಭಾಷೆಯಲ್ಲಿಡಬಹುದು.

3. ಡೈರಿಯಲ್ಲಿ ಬರಿಯಲ್ಪಡುವ ಅಂಕಗಳು ಸರಿಯಾಗಿ ಇರುವದಕ್ಕೆ ಹೆಡ್‌ಮಿನಿಸ್ಟೀರಿಯಲ್ ಆಫಿಸರ್ ಯಾನೆ ವುದ್ಯೋಗಸ್ತ ಜವಾಬ್ದಾರನಾಗಿರುತ್ತಾನೆ.

4. ಸೆಷನ್ಸ್‌ಕೋರ್ಟು ದರ್ಯಾಫ್ತ್‌ಬಗ್ಯೆ ಮೊಕದ್ದಮಾ ಕಮ್ಮಿಟ್ ಮಾಡಲ್ಪಟ್ಟ ಸಂದರ್ಭದಲ್ಲಿಯೂ, ಅಥವಾ ಅಪ್ಪೀಲ್ ಕೋರ್ಟ್‌ನವರು ಕಟ್ಟು ಅಪೇಕ್ಷಿಸಿದ ಸಂದರ್ಭದಲ್ಲಿಯೂ ಅಥವಾ ಸ್ಪೆಶಲ್ ಪವರ್ ಪಡದ ಮೇಜಸ್ಟ್ರೇಟರ ಆರ್ಡರ್ ಬಗ್ಯೆ ಕಳುಹಿಸಿದ ಸಂದರ್ಭದಲ್ಲಿಯೂ ಕಟ್ಟಿನ ಜೊತೇಲಿ ಈ ಡೈರಿಯಿಂದ ಬಂದು ಪೂರ್ತಿಯಾದ ನಕಲು ತೆಗದು ಕಳುಹಿಸಲ್ಪಡಬೇಕು.

5. ಸದರೀ ಡೈರಿ ಯಾವ ರೀತಿಯಲ್ಲಿ ಇಡಬೇಕೆಂಬುವದನ್ನ ವೊಗುಂ ಆಗಿ ಇದಕ್ಕೆ ಲಗತ್‌ಮಾಡಿರುವ ನಮೂನೆಯಲ್ಲಿ ತೋರಿಸಿಯಿಧೆ, ಆದರೆ ಪ್ರತಿ ಬಂದು ಮೊಕದ್ದಮೆಯ ಸಂದರ್ಭಾನುಸಾರವಾಗಿ ಅದರಲ್ಲಿ ಬರಿಯತಕ್ಕ ಅಂಕಗಳನ್ನ ನಮೂದು ಮಾಡಬೇಕು.

ಬಿಹೋಜೀಬ್ ಹುಕ್ಕುಂ,

ಎಸ್. ಹೇಮಾಜಿರಾವ್,

ರಜಿಸ್ಟ್ರಾರ್.